# ಭಲೇ ಕನ್ನಡತಿ!

## ಶ್ರೇಯಾಂಕಾ ಪಾಟೀಲ

### ಭಾರತೀಯ ಮಹಿಳಾ ಕ್ರಿಕೆಟ್ ನವತಾರೆ

**ಭಾರತೀಯ ಕ್ರಿಕೆಟ್‌ನ ನವತಾರೆ ಶ್ರೇಯಾಂಕಾ ಪಾಟೀಲ ಕನ್ನಡದವರು ಎನ್ನುವುದು ಕನ್ನಡಿಗರ ಹೆಮ್ಮೆ. 'ಆರ್‌ಸಿಬಿ' ಪುರುಷರ ತಂಡದ ಪಾಲಿಗೆ ಮರೀಚಿಕೆಯಾಗಿದ್ದ 'ಕಪ್' ಅನ್ನು 'ಡಬ್ಲ್ಯುಪಿಎಲ್'ನಲ್ಲಿ ಮಹಿಳೆಯರು ಗೆದ್ದಿದ್ದಾರೆ. ಈ ಗೆಲುವಿನ ಶ್ರೇಯದ ಕೇಂದ್ರಬಿಂದು ಶ್ರೇಯಾಂಕಾ.**

■ ಪ್ರಮೋದ




'ಈ ಸಲ ಕಪ್ ನಮ್ದೇ ಅಲ್ಲ; ಕಪ್ ನಮ್ದು...'
'ಮಹಿಳಾ ಪ್ರೀಮಿಯರ್ ಲೀಗ್' (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ಸ್ ಆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ನಾಯಕಿ ಸ್ಮೃತಿ ಮಂದಾನ ಲಕ್ಷಾಂತರ ಜನರ ಎದುರು ಆಡಿದ ಇದೊಂದು ಮಾತು ಈಗ ಸಾಮಾಜಿಕ ತಾಣಗಳಲ್ಲಿ ದೊಡ್ಡ ಟ್ರೆಂಡ್ ಆಗಿದೆ.

ಜನರನ್ನು ಸಂಭ್ರಮದಲ್ಲಿ ತೇಲಾಡುವಂತೆ ಮಾಡಿ ಕ್ರಿಕೆಟ್‌ಗೆ ಹೊಸ ಸ್ವರೂಪ ನೀಡಿದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡುವ ಆರ್‌ಸಿಬಿ ತಂಡದ ಅಭಿಮಾನಿಗಳ ಪ್ರತಿವರ್ಷದ ಆಸೆ, ಕನವರಿಕೆ ಹಾಗೂ ಹಾರೈಕೆ 'ಈ ಸಲ ಕಪ್ ನಮ್ದೇ' ಎನ್ನುವುದಾಗಿರುತ್ತದೆ. ಆದರೆ ಆರ್‌ಸಿಬಿ ತಂಡ ಹಲವು ಬಾರಿ ಪ್ರಶಸ್ತಿ ಸಮೀಪ ಬಂದರೂ ಐಪಿಎಲ್‌ನ ಹಿಂದಿನ 16 ವರ್ಷಗಳಲ್ಲಿ ಒಮ್ಮೆಯೂ ಟ್ರೋಫಿ ಎತ್ತಿ ಹಿಡಿದಿಲ್ಲ. ಹೀಗಾಗಿ ಬೆಂಗಳೂರು ತಂಡದ ಕಾಯಂ ಅಭಿಮಾನಿಗಳು ತಮ್ಮ ತಂಡ ಸೋತರೂ ಪ್ರತಿ ಟೂರ್ನಿ ಆರಂಭದಲ್ಲಿ 'ಈ ಸಲ ಕಪ್ ನಮ್ದೇ' ಎನ್ನುವ ಭರವಸೆಯ ಮಂತ್ರ ಜಪಿಸುತ್ತಿದ್ದರು. ಅಭಿಮಾನಿಗಳ ಆಸೆಯನ್ನು ಬೆಂಗಳೂರಿನ ಮಹಿಳಾ ಐಪಿಎಲ್ ತಂಡದವರು ಈಡೇರಿಸಿದ್ದಾರೆ.

ಸಾಮಾಜಿಕ ತಾಣಗಳಲ್ಲಿ ಆರ್‌ಸಿಬಿ ಮಹಿಳಾ ತಂಡದ ಸಾಧನೆಗೆ ಪ್ರಶಂಸೆ ವ್ಯಕ್ತವಾಗುತ್ತಿರುವುದು ಒಂದೆಡೆಯಾದರೆ, ಟ್ರೋಫಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಆಲ್‌ರೌಂಡ್ ಆಟಗಾರ್ತಿ ಕನ್ನಡತಿ ಶ್ರೇಯಾಂಕಾ ಪಾಟೀಲ ಸಾಧನೆ ಕೂಡ ಅಷ್ಟೇ ಟ್ರೆಂಡ್ ಆಗಿದೆ. ಯಾರು ಈ ಶ್ರೇಯಾಂಕಾ? ಯಾವ ಊರು? ಎನ್ನುವ ಚರ್ಚೆಗಳು ಜೋರಾಗಿವೆ.

ಕೆಲವೇ ವರ್ಷಗಳ ಹಿಂದಿನ ಮಾತಿದು: ಕರ್ನಾಟಕ ತಂಡ 19 ವರ್ಷದ ಒಳಗಿನವರ ಕ್ರಿಕೆಟ್ ಟೂರ್ನಿಗೆ ಸಜ್ಜಾಗಲು ಅಭ್ಯಾಸ ಪಂದ್ಯವನ್ನಾಡುತ್ತಿತ್ತು. ಗೆಲುವಿಗಾಗಿ ಕೊನೆಯ ಎಸೆತದಲ್ಲಿ ಏಳು ರನ್‌ಗಳ ಅಗತ್ಯವಿತ್ತು. ಆಗ ಬ್ಯಾಟ್ ಮಾಡುತ್ತಿದ್ದ ಬಲಗೈ ಆಟಗಾರ್ತಿ ಶ್ರೇಯಾಂಕಾ ಸಿಕ್ಸರ್ ಬಾರಿಸಿದ್ದರಿಂದ ಪಂದ್ಯ ಟೈ ಆಗಿ ಸೂಪರ್ ಓವರ್ ಹಂತಕ್ಕೆ ಹೋಗಿ ಅಲ್ಲಿ ರಾಜ್ಯ ತಂಡ ಗೆಲುವು ಪಡೆದಿತ್ತು.

22 ವರ್ಷದ ಶ್ರೇಯಾಂಕಾ ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ತಮ್ಮ ಎಂಟನೇ ವಯಸ್ಸಿನಿಂದ ಕ್ರಿಕೆಟ್ ಅಭ್ಯಾಸ ಆರಂಭಿಸಿದ ಮಗಳಿಗೆ ಅಪ್ಪನೇ ಮೊದಲ ಕೋಚ್. 2022–2023ನೇ ಸಾಲಿನ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಹೆಚ್ಚು ವಿಕೆಟ್ ಪಡೆದ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿದ್ದರು.

2019ರಲ್ಲಿ ಪುದುಚೇರಿ ವಿರುದ್ಧದ ಪಂದ್ಯದಲ್ಲಿ ಆಡುವ ಮೂಲಕ ರಾಜ್ಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಎರಡು ವರ್ಷಗಳ ಹಿಂದೆ ಮಹಿಳೆಯರ ಸೀನಿಯರ್ ಅಂತರ ವಲಯ ಕ್ರಿಕೆಟ್ ಟೂರ್ನಿಯಲ್ಲಿ ದಕ್ಷಿಣ ವಲಯದ ತಂಡವನ್ನು